# Fourth Semester B.Com. Degree Examination, April/May 2019

*(CBCS Scheme)*

## Commerce

## CORPORATE ACCOUNTING – II

*Time : 3 Hours]* *[Max. Marks : 90*

*Instructions to Candidates : Answers should be written completely either in English or in Kannada.*

### SECTION – A / ವಿಭಾಗ – ಎ

Answer any **TEN** of the following sub-questions. Each sub-question carries **2** marks. **(10 × 2 = 20)**

ಕೆಳಗಿನ ಯಾವುದಾದರೂ ಹತ್ತು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ **2** ಅಂಕಗಳು :

1\. (a) State any four expenses charged only to post Incorporation Period.

ಕಂಪನಿ ಸಂಯೋಜನೆ ನಂತರ ಅವಧಿಯಲ್ಲಿನ ಯಾವುದಾದರೂ ನಾಲ್ಕು ಖರ್ಚುಗಳನ್ನು ತಿಳಿಸಿ.

(b) How do you calculate sales ratio?

ಮಾರಾಟ ಅನುಪಾತವನ್ನು ಹೇಗೆ ಕಂಡು ಹಿಡಿಯುವಿರಿ?

(c) What do you mean by purchase consideration?

ಕೊಳ್ಳುವ ಪ್ರತಿಫಲದ ಬಗ್ಗೆ ನಿಮಗೇನು ತಿಳಿದಿದೆ?

(d) State the ledger accounts to be prepared while closing the books of transferor company.

ವರ್ಗಾವಣೆದಾರ ಕಂಪನಿಯ ಲೆಕ್ಕಪತ್ರಗಳನ್ನು ಅಂತಿಮಗೊಳಿಸಲು ಯಾವ ಖಾತೆಗಳನ್ನು ತೆರೆಯುವಿರಿ?

(e) Pass on entry for PC due in the books of Vendor Co.

ಮಾರುವ ಕಂಪನಿಯಲ್ಲಿ ಕೊಳ್ಳುವ ಪ್ರತಿಫಲ ನಮೂದಿಸಲು ರೋಜನ್ನು ದಾಖಲಿಸಿ.

(f) What is Inter-Company Owings?

ಅಂತರ-ಕಂಪನಿ ಋಣಗಳು ಎಂದರೇನು?

(g) What is capital reduction account?

ಬಂಡವಾಳ ಖೋತಾ ಖಾತೆ ಎಂದರೇನು?

(h) State any two differences between Internal reconstruction and External reconstruction.

ಆಂತರಿಕ ಮರು ನಿರ್ಮಾಣ ಮತ್ತು ಬಾಹ್ಯ ಮರು ನಿರ್ಮಾಣ ಎರಡು ವ್ಯತ್ಯಾಸಗಳನ್ನು ತಿಳಿಸಿ.

(i) Who are contributories?

ಕೊಡುಗೆದಾರರು ಎಂದರೆ ಯಾರು?

(j) State any two circumstances under which a company can be wound up by the court.

ಯಾವ ಸಂದರ್ಭಗಳಲ್ಲಿ ಕಾನೂನಿನ ಮುಖಾಂತರ ಕಂಪನಿಯನ್ನು ಮುಚ್ಚಬಹುದು ತಿಳಿಸಿ.

(k) What is voluntary liquidation of a company?

ಕಂಪನಿಯ ಸ್ವಯಂ ವಿಸರ್ಜನೆ ಎಂದರೇನು?

(l) Mention any two objectives of amalgamation.

ವಿಲೀನಗೊಳ್ಳುವಿಕೆಯ ಯಾವುದಾದರೂ ಎರಡು ಉದ್ದೇಶಗಳನ್ನು ತಿಳಿಸಿ.

## SECTION – B/ ವಿಭಾಗ – ಬಿ

Answer any **FIVE** of the following questions. Each question carries **5** marks : **(5 × 5 = 25)**

ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **5** ಅಂಕಗಳು :

2. Give proforma entries in the books of purchasing company at the time of amalgamation.

ವಿಲೀನಕರಣ ವೇಳೆಯಲ್ಲಿ ಕೊಳ್ಳುವ ಕಂಪನಿಯ ಲೆಕ್ಕ ಪತ್ರಗಳನ್ನು ಆರಂಭಿಸಲು ಅನುರೂಪತೆಯ ರೋಜನ್ನು ಬರೆಯಿರಿ.

3. State the order of payment in case of Liquidation.

ವಿಸರ್ಜನೆಯಲ್ಲಿನ ಪಾವತಿಯ ಅನುಕ್ರಮವನ್ನು ತಿಳಿಸಿರಿ.

4. A company had purchased a business on 1-4-2018 and the company received its certificate of incorporation on 1-9-2018. There were 25 employees before incorporation later increased to 40 after incorporation. The amount of salary also increased from ₹ 400 p.m. to 600 p.m. per employee.

Find out weighted time ratio and amount of salary paid in pre and post incorporation periods.

ಕಂಪನಿಯು ಒಂದು ವ್ಯವಹಾರವನ್ನು 1-4-2018 ರಂದು ಕೊಂಡು ಕೊಂಡಿತು. ಕಂಪನಿಯ ಸ್ಥಾಪನಾ ಪತ್ರವು 1.9.2018 ರಂದು ಲಭಿಸಿತು. ಸ್ಥಾಪನೆಗೂ ಮುನ್ನ ಕಂಪನಿಯಲ್ಲಿ 25 ನೌಕರರಿದ್ದರು ಸ್ಥಾಪನೆಯ ನಂತರ ನೌಕರರ ಸಂಖ್ಯೆ 40ಕ್ಕೆ ಏರಿತು. ಅದೇ ರೀತಿ ನೌಕರರ ಸಂಬಳವು ರೂ. 400 p.m. ನಿಂದ ರೂ. 600ಕ್ಕೆ ಪ್ರತಿ ನೌಕರನಿಗೆ ಏರಿಕೆಯಾಯಿತು.

ತೂಕದ ಕಾಲಾನುಪಾತ ಕಂಡು ಹಿಡಿಯಿರಿ ಮತ್ತು ಸ್ಥಾಪನೆಗೂ ಮುನ್ನ ಮತ್ತು ನಂತರದ ಸಂಬಳವನ್ನು ಕಂಡು ಹಿಡಿಯಿರಿ.

5. 'A' Ltd and 'B' Ltd have decided to amalgamate and form 'C' Ltd when their financial position was as under :

| | 'A' Ltd | 'B' Ltd |
|---|---|---|
| Assets | 6,00,000 | 5,00,000 |
| Liabilities | 2,00,000 | 1,50,000 |
| Share capital | 4,00,000 | 3,50,000 |

'C' Ltd agreed to issue 40,000 shares of ₹ 10 each at 10% premium to 'A' Ltd and 30,000 shares of ₹ 10 each at 10% premium to 'B' Ltd.

Compute goodwill or capital reserve.

'A' ಕಂಪನಿ ಮತ್ತು 'B' ಕಂಪನಿಗಳು ವಿಲೀನಗೊಳ್ಳಲು ತೀರ್ಮಾನಿಸಿ 'C' ಎಂಬ ಹೊಸ ಕಂಪನಿಯನ್ನು ಪ್ರಾರಂಭ ಮಾಡುತ್ತಾರೆ. ಅವರ ಹಣಕಾಸಿನ ಸ್ಥಿತಿಗಳು ಕೆಳಕಂಡಂತಿವೆ :

| | 'A' ಕಂಪನಿ | 'B' ಕಂಪನಿ |
|---|---|---|
| ಆಸ್ತಿಗಳು | 6,00,000 | 5,00,000 |
| ಜವಾಬ್ದಾರಿಗಳು | 2,00,000 | 1,50,000 |
| ಷೇರು ಬಂಡವಾಳ | 4,00,000 | 3,50,000 |

'C' ಕಂಪನಿಯು 40,000 ಸಾಮಾನ್ಯ ಷೇರುಗಳನ್ನು ರೂ. 10 ಮುಖ ಬೆಲೆಯ ಶೇಕಡಾ 10 ರಷ್ಟು ಹೆಚ್ಚುವರಿಯಾಗಿ 'A'ಗೆ ನೀಡಲಾಯಿತು ಮತ್ತು ರೂ. 10 ಮುಖ ಬೆಲೆಯ 30,000 ಸಾಮಾನ್ಯ ಷೇರುಗಳನ್ನು ಶೇಕಡಾ 10 ರಷ್ಟು ಹೆಚ್ಚುವರಿ ಮೌಲ್ಯವಾಗಿ 'B'ಗೆ ನೀಡಲಾಯಿತು.

ಸುನಾಮ ಅಥವಾ ಮೀಸಲು ಬಂಡವಾಳವನ್ನು ಕಂಡು ಹಿಡಿಯಿರಿ.

6. Journalise the following transaction in the books of a limited company :

(a) The company has a paid up capital of 25000 equity shares of ₹ 100 each ₹ 75 called up and paid up. If resolved to cancel the uncalled capital of ₹ 25 per share

(b) The company has a capital of 135000 equity shares of ₹ 10 each fully paid. After having found the capital to be in excess it resolves to refund of ₹ 6,75,000

(c) The company has 250000 equity shares of ₹ 10 each fully paid up in view of the huge accumulated losses it resolved to reorganise the capital by reducing the shares to ₹ 8 each.

ಒಂದು ನಿಯಮಿತ ಕಂಪನಿಯ ವ್ಯವಹಾರಗಳಿಗೆ (ಕೆಳಕಂಡ) ರೋಜು ದಾಖಲಿಸಿ :

(a) ರೂ. 100ರ ಮುಖ ಬೆಲೆಯ 25000 ಸಾಮಾನ್ಯ ಷೇರುಗಳ ಪಾವತಿಸಿದ ಬಂಡವಾಳವಿದ್ದು ರೂ. 75 ರಂತೆ ಕರೆದ ಮತ್ತು ಪಾವತಿಸಿದ ಬಂಡವಾಳವಿರುತ್ತದೆ. ರೂ. 25ರ ಪ್ರತಿ ಷೇರಿನ ಕರೆದ ಬಂಡವಾಳವನ್ನು ರದ್ದುಗೊಳಿಸಲು ಸಂಕಲ್ಪಿಸಲಾಗಿದೆ.

(b) ಪೂರ್ಣ ಪಾವತಿಸಿದ ರೂ. 10ರ ಮುಖ ಬೆಲೆಯ 135000 ಸಾಮಾನ್ಯ ಷೇರು ಬಂಡವಾಳವನ್ನು ಕಂಪನಿ ಹೊಂದಿದ್ದು, ಈ ಬಂಡವಾಳವು ಹೆಚ್ಚುವರಿಯಾಗಿದ್ದು ರೂ. 6,75,000 ರಷ್ಟನ್ನು ಹಿಂತಿರುಗಿಸಲು ತೀರ್ಮಾನಿಸಲಾಗಿದೆ.

(c) ಪೂರ್ತಿ ಪಾವತಿಸಿದ ರೂ. 10ರ ಮುಖ ಬೆಲೆಯ 250000 ಸಾಮಾನ್ಯ ಷೇರು ಮೌಲ್ಯವನ್ನು ಹೆಚ್ಚು ಸಂಗ್ರಹಿಸಿದ ನಷ್ಟವೆಂದು ಷೇರು ಬಂಡವಾಳವನ್ನು ರೂ. 8ಕ್ಕೆ ಇಳಿಸಲು ತೀರ್ಮಾನಿಸಲಾಗಿದೆ.

7. The Western Co. Ltd went into voluntary liquidation on 1-1-2018 on which date dividends on the preference shares were in arrears for two years. The subscribed capital of the company consists of :

(a) 40,000 6% preference shares of ₹ 10 each fully paid

(b) 50,000 equity shares of ₹ 10 each ₹ 6 paid

The assets realised ₹ 3,50,000. The expenses of liquidation came to ₹ 9,800. The liquidator is entitled to a remuneration of ₹ 11,000 and a commission of 2.5% on the amount paid to preference shareholders as capital and dividend. The liability amounted to ₹ 20,000. There is an express provision about payment of arrears of dividend in priority to equity share capital.

Prepare Liquidatory Final Statement of Account.

ವೆಸ್ಟರ್ನ್ ಕಂಪನಿಯು ದಿನಾಂಕ 1-1-2018 ರಂದು ಸ್ವಯಂ ವಿಸರ್ಜನೆಗೊಂಡಿತು. ಈ ಅವಧಿಯಲ್ಲಿ ಆದ್ಯತಾ ಷೇರಿನ ಲಾಭಾಂಶವು ಎರಡು ವರ್ಷ ಹಿಂಬಾಕಿಯಿತ್ತು. ವಂತಿಕೆಯಾದ ಬಂಡವಾಳವು ಕೆಳಕಂಡಂತಿದೆ :

(a) ರೂ. 10ರ ಮುಖ ಬೆಲೆಯ ಪೂರ್ಣ ಪಾವತಿಸಿದ ಶೇ.6ರ 40,000 ಆದ್ಯತಾ ಷೇರುಗಳು

(b) ರೂ. 10ರ ಮುಖ ಬೆಲೆಯ ಪಾವತಿಸಿದ ಶೇ.6ರ 50,000 ಸಾಮಾನ್ಯ ಷೇರುಗಳು

ರೂ. 3,50,000 ವಿಸರ್ಜನೆಯ ಖರ್ಚುಗಳು ರೂ. 9,800 ವಿಸರ್ಜನಾಧಿಕಾರಿಯು ರೂ. 11,000ಗಳನ್ನು ಸಂಭಾವನೆಯಾಗಿ ಪಡೆಯಲು ಅರ್ಹನಿರುತ್ತಾನೆ ಮತ್ತು ಆದ್ಯತಾ ಷೇರುದಾರರಿಗೆ ಬಂಡವಾಳ ಮತ್ತು ಲಾಭಾಂಷವಾಗಿ ಪಾವತಿಸಿದ ಮೊತ್ತದ ಮೇಲೆ ಶೇ. 2.5 ರಷ್ಟು ದಲ್ಲಾಳಿ ಪಡೆಯಬಹುದಾಗಿದೆ. ಜವಾಬ್ದಾರಿಗಳ ಮೊತ್ತ ರೂ. 20,000 ಹಾಗೂ ಸಾಮಾನ್ಯ ಷೇರು ಬಂಡವಾಳಕ್ಕಿಂತ ಲಾಭಾಂಶದ ಹಿಂಬಾಕಿ ನೀಡಲು ಪ್ರಥಮ ಆದ್ಯತೆ ನೀಡಲಾಗಿದೆ.

ವಿಸರ್ಜನಾಧಿಕಾರಿಯ ಅಂತಿಮ ಪಟ್ಟಿಯನ್ನು ತಯಾರಿಸಿ.

8. M Ltd is absorbed by N Ltd. It agrees to make the following payments.

(a) Cash at ₹ 2 per share for 10,000 shares of ₹ 5 each issued by M Ltd

(b) Issued two shares of ₹ 20 each for every three shares held in M Ltd

(c) ₹ 25,000 cash to creditors of 'M' Ltd in settlement of their account

(d) ₹ 75,000 12% debentures of 'M' Ltd settled by issuing 10% debentures in 'N' Ltd at Par

Calculate Purchase Consideration.

M ಕಂಪನಿಯು 'N' ಕಂಪನಿಯಿಂದ ಲೀನಗೊಳ್ಳಲು ಒಪ್ಪಿತು ಮತ್ತು ಕೆಳಕಂಡಂತೆ ಪಾವತಿಸಲಾಗಿದೆ :

(a) M ಕಂಪನಿಯ ರೂ. 5ರ ಮುಖ ಬೆಲೆಯ 10,000 ಷೇರುಗಳಿಗೆ ರೂ. 2 ರಂತೆ ಪ್ರತಿ ಷೇರಿಗೆ ನಗದು ನೀಡಲಾಯಿತು.

(b) M ಕಂಪನಿಯ ಪ್ರತಿ ಮೂರು ಷೇರುಗಳಿಗೆ ರೂ. 20 ಮುಖ ಬೆಲೆಯ ಎರಡು ಷೇರುಗಳನ್ನು ನೀಡಿತು.

(c) M ಕಂಪನಿಯ ಸಾಲಿಗರಿಗೆ ಲೆಕ್ಕಪತ್ರಗಳನ್ನು ಬಗೆಹರಿಸಲು ರೂ. 25,000 ನಗದು ನೀಡಿತು.

(d) M ಕಂಪನಿಯ ಶೇ. 12ರ ರೂ. 75,000 ಸಾಲಪತ್ರಗಳಿಗೆ ಪ್ರತಿಯಾಗಿ 'N' ಕಂಪನಿಯ ಶೇ. 10ರ ಸಾಲಪತ್ರಗಳನ್ನು ಮುಖ ಬೆಲೆಗೆ ಪಾವತಿಸಿತು.

ಕೊಳ್ಳುವ ಪ್ರತಿಫಲವನ್ನು ಕಂಡು ಹಿಡಿಯಿರಿ.

## SECTION – C/ವಿಭಾಗ – ಸಿ

Answer any **THREE** of the following questions. Each question carries **15** marks : **(3 × 15 = 45)**

ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **15** ಅಂಕಗಳು :

9. Sun Ltd and Moon Ltd decided to amalgamate their business and form a new company called Sunshine Ltd with an authorised capital of ₹ 15,00,000 divided into shares of ₹ 10 each. The following are the balance sheets of the companies.

| Particulars | Sun Ltd | Moon Ltd |
|---|---|---|
| I Equity and liabilities : | | |
| Share capital | 3,00,000 | 4,00,000 |
| Reserves & Surplus | 1,00,000 | 10,000 |
| 5% Debentures | 1,00,000 | – |
| Creditors | 50,000 | 70,000 |
| Total Equity & Liabilities | 5,50,000 | 4,80,000 |

| Particulars | Sun Ltd | Moon Ltd |
|---|---|---|
| II Assets : | | |
| Machinery | 3,50,000 | 3,70,000 |
| Goodwill | 50,000 | – |
| Stock | 80,000 | 60,000 |
| Debtors | 40,000 | 40,000 |
| Cash | 30,000 | 10,000 |
| Total Assets | 5,50,000 | 4,80,000 |

The following are the terms of agreement :

(a) The Assets and liabilities of Sun Ltd are to be taken over at book values except goodwill, machinery and stock which are to be valued at ₹ 1,00,000 ₹ 3,20,000 and ₹ 90,000 respectively

(b) The assets (except cash) of Moon Ltd. are valued at 10% less than the book values and the creditors are taken over at book figure

(c) The purchase consideration being paid in the form of equity shares.

Pass opening entries and prepare amalgamated Balance sheet in the books of Sunshine Ltd.

ಸೂರ್ಯ ಕಂಪನಿ ಮತ್ತು ಚಂದ್ರ ಕಂಪನಿಗಳು ವಿಲೀನಗೊಳ್ಳಲು ತೀರ್ಮಾನಿಸಿ ಸೂರ್ಯಕಾಂತಿ ಎಂಬ ಹೊಸ ಕಂಪನಿಯು ಪ್ರಾರಂಭಿಸಿ ಅಧಿಕೃತ ಬಂಡವಾಳವಾದ ರೂ. 15,00,000ನ್ನು ರೂ. 10ರ ಮುಖ ಬೆಲೆಯ ಷೇರುಗಳಾಗಿ ವಿಭಜಿಸಲಾಯಿತು. ಆಗ ಕಂಪನಿಗಳ ಆಢಾವೆ ಪತ್ರ ಈ ಕೆಳಕಂಡಂತಿದೆ :

| ವಿವರಗಳು | ಸೂರ್ಯ ಕಂಪನಿ | ಚಂದ್ರ ಕಂಪನಿ |
|---|---|---|
| I. ಷೇರುಗಳು ಮತ್ತು ಜವಾಬ್ದಾರಿಗಳು : | | |
| ಷೇರು ಬಂಡವಾಳ | 3,00,000 | 4,00,000 |
| ಮೀಸಲು ಮತ್ತು ಉಳಿಕೆ | 1,00,000 | 10,000 |
| ಶೇ. 5ರ ಸಾಲಪತ್ರಗಳು | 1,00,000 | – |
| ಸಾಲಿಗರು | 50,000 | 70,000 |
| ಒಟ್ಟು | 5,50,000 | 4,80,000 |
| II. ಆಸ್ತಿಗಳು : | | |
| ಯಂತ್ರೋಪಕರಣಗಳು | 3,50,000 | 3,70,000 |
| ಸುನಾಮ | 50,000 | – |
| ದಾಸ್ತಾನು | 80,000 | 60,000 |
| ಋಣಿಗಳು | 40,000 | 40,000 |
| ನಗದು | 30,000 | 10,000 |
| ಒಟ್ಟು | 5,50,000 | 4,80,000 |

ಒಡಂಬಡಿಕೆಯ ನಿಯಮಗಳು ಕೆಳಗಿನಂತಿವೆ :

(a) ಸೂರ್ಯ ಕಂಪನಿಯ ಆಸ್ತಿ ಮತ್ತು ಜವಾಬ್ದಾರಿಗಳನ್ನು ದಾಖಲಿಸಿದ ಮೌಲ್ಯಕ್ಕೆ ತೆಗೆದುಕೊಂಡಿದೆ. ಇದರಲ್ಲಿ ಸುನಾಮ ಯಂತ್ರೋಪಕರಣಗಳು ಮತ್ತು ದಾಸ್ತಾನನ್ನು ಹೊರತುಪಡಿಸಲಾಗಿದ್ದು ಇವುಗಳನ್ನು ರೂ. 1,00,000, ರೂ. 3,20,000 ಮತ್ತು ರೂ. 90,000ಗಳನ್ನು ಅನುಕ್ರಮವಾಗಿ ಪರಿಗಣಿಸಲಾಗಿದೆ.

(b) ಚಂದ್ರ ಕಂಪನಿಯ ಆಸ್ತಿಗಳನ್ನು (ನಗದು ಹೊರತುಪಡಿಸಿ) ಶೇ. 10 ರಂತೆ ದಾಖಲಾದ ಮೌಲ್ಯಕ್ಕಿಂತ ಕಡಿಮೆ ಮೌಲ್ಯೀಕರಿಸಲಾಗಿದೆ ಮತ್ತು ಸಾಲಿಗರನ್ನು ದಾಖಲಿಸಿದ ಮೊತ್ತಕ್ಕೆ ತೆಗೆದುಕೊಳ್ಳಲಾಗಿದೆ.

(c) ಕೊಳ್ಳುವ ಪ್ರತಿಫಲವನ್ನು ಸಾಮಾನ್ಯ ಷೇರುಗಳಿಂದ ನೀಡುವುದು.

ಸೂರ್ಯಕಾಂತಿ ಕಂಪನಿಯಲ್ಲಿ ಆರಂಭಿಕ ರೋಜನ್ನು ದಾಖಲಿಸಿ ಮತ್ತು ವಿಲೀನಗೊಳಿಸಿದ ಆಢಾವೆ ಪತ್ರವನ್ನು ತಯಾರಿಸಿ.

10. Gagan Private Limited was incorporated on 1-7-2017 to take over the running business of Mr. Anand with effect from 1-4-2017. The following profit and loss account for the year ended 2018 was drawn up :

Profit and Loss A/c on 31-3-2018

| | |
|---|---|
| I. Income : | |
| Gross profit | 98,000 |
| Bad debts recovered | 500 |
| Total | 98,500 |
| II. Expenses : | |
| Commission | 2,625 |
| Advertisement | 5,250 |
| M D's remuneration | 9,000 |
| Depreciation | 2,800 |
| Salaries | 18,000 |
| Insurance | 600 |
| Preliminary expenses | 700 |
| Rent and taxes | 3,000 |
| D's count | 350 |
| Bad debt | 1,250 |
| Net profit | 54,925 |
| Total | 98,500 |

The following details are available :

(a) The average monthly turnover from July 2017 onwards was double than of the previous months

(b) Rent for the first three months was paid at ₹ 200 p.m. and thereafter at a rate increased by ₹ 50 p.m

(c) Bad debts ₹ 350 related to sales effected after 1st September 2017 and the realisation of bad debts was in respect of debts written off during 2015–16

(d) Advertisement expenses were directly proportionate to the sales.

You are required to find out the profit prior to incorporation and after incorporation of the company.

ಗಗನ್ ಕಂಪನಿಯು ಮಿ. ಆನಂದ್‌ರವರ ವ್ಯವಹಾರವನ್ನು ದಿನಾಂಕ 1-4-2017 ರಿಂದ ಅನ್ವಯವಾಗುವಂತೆ ದಿನಾಂಕ 1-7-2017 ರಂದು ಸ್ಥಾಪನೆಯಾಯಿತು.

31-3-2018ರ ಲಾಭ ಮತ್ತು ನಷ್ಟ ಖಾತೆಯು ಕೆಳಕಂಡಂತಿದೆ :

I. ಆದಾಯ :

| | |
|---|---|
| ಒಟ್ಟು ಲಾಭ | 98,000 |
| ವಸೂಲಾದ ಕರಡು ಸಾಲ | 500 |
| ಒಟ್ಟು | 98,500 |

II. ಖರ್ಚುಗಳು :

| | |
|---|---|
| ದಲ್ಲಾಳಿ | 2,625 |
| ಜಾಹೀರಾತು | 5,250 |
| ವ್ಯವಸ್ಥಾಪಕ ನಿರ್ದೇಶಕರ ಸಂಭಾವನೆ | 9,000 |
| ಸವಕಳಿ | 2,800 |
| ಸಂಬಳ | 18,000 |
| ವಿಮೆ | 600 |
| ಪ್ರಾರಂಭಿಕ ಖರ್ಚುಗಳು | 700 |
| ಬಾಡಿಗೆ ಮತ್ತು ತೆರಿಗೆ | 3,000 |
| ಸೋಡಿ | 350 |
| ಕರಡು ಸಾಲ | 1,250 |
| ನಿವ್ವಳ ಲಾಭ | 54,925 |
| ಒಟ್ಟು | 98,500 |

ಕೆಳಕಂಡ ಮಾಹಿತಿ ಲಭ್ಯವಿದೆ :

(a) ಸರಾಸರಿ ಮಾಸಿಕ ಮಾರಾಟವು ಜುಲೈ 2017 ರಿಂದ ಹಿಂದಿನ ಮಾಸಗಳಿಗಿಂತ ದ್ವಿಗುಣವಾಗಿರುತ್ತದೆ.

(b) ಮೊದಲ ಮೂರು ತಿಂಗಳ ಬಾಡಿಗೆ ಪ್ರತಿ ತಿಂಗಳು ರೂ. 200 ಪಾವತಿಯಾಗಿದೆ ನಂತರ ಪ್ರತಿ ತಿಂಗಳು ರೂ. 50 ರಂತೆ ಏರಿಕೆಯಾಗಿದೆ.

(c) ರೂ. 350 ಕರಡು ಸಾಲವು 1-9-2017ರ ನಂತರದ ಮಾರಾಟಕ್ಕೆ ಸಂಬಂಧಿಸಿದ್ದು ವಸೂಲಿ ಮಾಡುವ ಕರಡು ಸಾಲ 2015–16ರಲ್ಲಿ ರದ್ದುಗೊಳಿಸಲಾಗಿದೆ.

(d) ಜಾಹೀರಾತು ಖರ್ಚು ಮಾರಾಟ ಅನುಪಾತಕ್ಕೆ ನೇರವಾಗಿರುತ್ತದೆ.

ನಿಗಮ ಸ್ಥಾಪನೆ ಮುಂಚಿನ ಹಾಗೂ ನಂತರದ ಲಾಭವನ್ನು ಕಂಡು ಹಿಡಿಯಿರಿ.

11. The following is the balance sheet of Mourya Ltd as on 31-3-2018.

| Particulars | Amount |
|---|---|
| I. Equity and liabilities : | |
| Share capital (10000 shares of ₹ 20 each fully paid up) | 2,00,000 |
| Reserves and Surplus | 20,000 |
| 6% Debentures | 1,00,000 |
| Provident fund | 8,000 |
| Sundry creditors | 21,000 |
| Total | 3,49,000 |
| II. Assets : | |
| Building | 80,000 |
| Machinery | 1,20,000 |
| Furniture | 9,000 |
| Goodwill | 30,000 |
| Investments | 10,000 |
| Stock | 50,000 |
| Debtors | 30,000 |
| Bank | 20,000 |
| Total | 3,49,000 |

Mourya Ltd is absorbed by Vandana Ltd on the above date the consideration being the taking over of the liabilities, the repayment of 6% debentures at a premium of 10% by the issue of 9% Mortgage debentures in the Vandana Ltd and a payment of ₹ 10 per share in cash and the exchange of 3 fully paid ₹ 10 each in Vandana Ltd at the market price of ₹ 12 per share for every 2 shares in the Mourya Ltd.

Show the necessary accounts to close the books of Mourya Ltd and Pass the necessary entries in the books of Vandana Ltd.

ದಿನಾಂಕ 31-3-2018ಕ್ಕೆ ಸಂಬಂಧಿಸಿದಂತೆ ಮೌರ್ಯ ಕಂಪನಿಯ ಅಢಾವೆ ಪತ್ರವು ಕೆಳಕಂಡಂತಿದೆ :

| ವಿವರಗಳು | ರೂ. |
|---|---|
| I. ಷೇರುಗಳು ಮತ್ತು ಜವಾಬ್ದಾರಿಗಳು : | |
| ಷೇರು ಬಂಡವಾಳ (ರೂ. 20ರ ಮುಖ ಬೆಲೆಯ ಪೂರ್ಣ ಪಾವತಿಸಿದ 10000 ಸಾಮಾನ್ಯ ಷೇರುಗಳು) | 2,00,000 |
| ಮೀಸಲು ಮತ್ತು ಉಳಿಕೆ | 20,000 |
| ಶೇ. 6ರ ಸಾಲಪತ್ರಗಳು | 1,00,000 |
| ಭವಿಷ್ಯ ನಿಧಿ | 8,000 |
| ಸಾಲಿಗರು | 21,000 |
| ಒಟ್ಟು | 3,49,000 |
| II. ಆಸ್ತಿಗಳು : | |
| ಕಟ್ಟಡಗಳು | 80,000 |
| ಯಂತ್ರೋಪಕರಣಗಳು | 1,20,000 |
| ಪೀಠೋಪಕರಣಗಳು | 9,000 |
| ಸುನಾಮ | 30,000 |
| ಹೂಡಿಕೆಗಳು | 10,000 |
| ದಾಸ್ತಾನು | 50,000 |
| ಋಣಗಳು | 30,000 |
| ಬ್ಯಾಂಕಿನ ನಗದು | 20,000 |
| ಒಟ್ಟು | 3,49,000 |

ಮೌರ್ಯ ಕಂಪನಿಯು ವಂದನ ಕಂಪನಿಯಿಂದ ಲೀನಗೊಂಡಿತು. ಕೊಳ್ಳುವ ಪ್ರತಿಫಲವು ಕೊಂಡುಕೊಂಡ ಜವಾಬ್ದಾರಿಯಾಗಿರುತ್ತದೆ. ಶೇ. 6ರ ಸಾಲಪತ್ರಗಳಿಗೆ ಶೇ. 10ರ ಅಧಿಕ ಮೌಲ್ಯ ನೀಡಿ ವಂದನ ಕಂಪನಿಯು ಶೇ. 9ರ ಅಡಮಾನ ಸಾಲಪತ್ರಗಳನ್ನು ನೀಡಿತು. ಪ್ರತಿ ಷೇರಿಗೆ ರೂ. 10 ರಂತೆ ನಗದನ್ನು ನೀಡುವುದು ಮತ್ತು ಮೌರ್ಯ ಕಂಪನಿಯ ಎರಡು ಷೇರುಗಳಿಗೆ ಪ್ರತಿಯಾಗಿ ವಂದನ ಕಂಪನಿಯ ರೂ. 10ರ ಮುಖ ಬೆಲೆಯ 3 ಶೇರುಗಳನ್ನು ಮಾರುಕಟ್ಟೆ ಮೌಲ್ಯ ರೂ. 12 ಪ್ರತಿ ಷೇರಿಗೆ ನೀಡಲಾಯಿತು.

ಮೌರ್ಯ ಕಂಪನಿಯಲ್ಲಿ ಲೆಕ್ಕಪತ್ರಗಳನ್ನು ಕೊನೆಗೊಳಿಸಲು ಖಾತಾ ಪುಸ್ತಕಗಳನ್ನು ತಯಾರಿಸಿ ಮತ್ತು ವಂದನ ಕಂಪನಿಯಲ್ಲಿ ರೋಜನ್ನು ದಾಖಲಿಸಿ.

12. The following is the balance sheet of Deepu Ltd as at 31-3-2018.

| Particulars | Amount |
|---|---|
| I. Equity and liabilities : | |
| Share capital | |
| 20,000 equity shares of ₹ 100 each | 20,00,000 |
| 12% Debentures | 6,20,000 |
| Sundry Creditors | 3,00,000 |
| Total | 29,20,000 |
| II. Assets : | |
| Land & Buildings | 1,50,000 |
| Plant & Machinery | 3,00,000 |
| Furniture | 80,000 |
| Goodwill | 25,000 |
| Debtors | 60,000 |
| Stock | 2,70,000 |
| Bank | 35,000 |
| Preliminary exps. | 20,000 |
| P & L A/c | 19,80,000 |
| Total | 29,20,000 |

The following scheme of reconstruction is executed

(a) Equity shares are reduced by ₹ 95 per share

(b) Debenture holders agree to forego ₹ 1,20,000 and 12% debentures are converted into 14% debenture

(c) Creditors are given the option to either accept 50% of their claim in cash in full settlement or to convert their claim into equity shares of ₹ 10 each, creditors for ₹ 2,00,000 opted for shares in full satisfaction of their claims

(d) To make payment to creditors opting for cash payment and to arrangement working capital the company issues 50,000 equity shares of ₹ 10 each at par the entire amount being payable along with applications. The issue was fully subscribed.

(e) Land and building are revalued at ₹ 2,00,000 where as plant & machinery is to be written down to ₹ 2,10,000. A provision amounting to ₹ 5,000 is to be made for doubtful debts.

Pass journal entries and draft the Company's balance sheet immediately reconstruction.

ದೀಪು ಕಂಪನಿಯ ಆಢಾವೆ ಪತ್ರವು ದಿನಾಂಕ 31-3-2018ರಲ್ಲಿ ಕೆಳಕಂಡಂತಿದೆ :

| ವಿವರಗಳು | ರೂ. |
|---|---|
| I. ಶೇರುಗಳು ಮತ್ತು ಜವಾಬ್ದಾರಿಗಳು : | |
| ಶೇರು ಬಂಡವಾಳ | |
| ರೂ. 100ರ ಮುಖ ಬೆಲೆಯ 20,000 ಸಾಮಾನ್ಯ ಶೇರುಗಳು | 20,00,000 |
| ಶೇ. 12ರ ಸಾಲಪತ್ರಗಳು | 6,20,000 |
| ಸಾಲಿಗರು | 3,00,000 |
| ಒಟ್ಟು | 29,20,000 |
| II. ಆಸ್ತಿಗಳು : | |
| ಕಟ್ಟಡಗಳು | 1,50,000 |
| ಸ್ಥಾವರ ಮತ್ತು ಯಂತ್ರೋಪಕರಣಗಳು | 3,00,000 |
| ಪೀಠೋಪಕರಣಗಳು | 80,000 |
| ಸುನಾಮ | 25,000 |
| ಋಣಿಗಳು | 60,000 |
| ದಾಸ್ತಾನು | 2,70,000 |
| ಬ್ಯಾಂಕಿನ ನಗದು | 35,000 |
| ಪ್ರಾರಂಭಿಕ ಖರ್ಚುಗಳು | 20,000 |
| ಲಾಭ ಮತ್ತು ನಷ್ಟ ಖಾತೆ | 19,80,000 |
| ಒಟ್ಟು | 29,20,000 |

ಕೆಳಕಂಡ ಮರು ನಿರ್ಮಾಣದ ಯೋಜನೆಯನ್ನು ನೆರವೇರಿಸಲಾಗಿದೆ :

(a) ಪ್ರತಿ ಷೇರಿಗೆ ರೂ. 95 ರಂತೆ ಸಾಮಾನ್ಯ ಷೇರುಗಳನ್ನು ಕಡಿತಗೊಳಿಸುವುದು.

(b) ಸಾಲಪತ್ರದಾರರು ರೂ. 1,20,000 ತ್ಯಾಗ ಮಾಡಲು ಒಪ್ಪಿ ಅದಕ್ಕೆ ಪ್ರತಿಯಾಗಿ ಶೇ. 12ರ ಸಾಲಪತ್ರಗಳನ್ನು ಶೇ. 14 ರಂತೆ ಪರಿವರ್ತಿಸಲಾಗಿದೆ.

(c) ಸಾಲಿಗರಿಗೆ ಶೇ. 50ರ ನಗದು ಅಥವಾ ಅವರಿಗೆ ಬರುವ ಹಣವನ್ನು ರೂ. 10ರ ಮುಖ ಬೆಲೆಯ ಸಾಮಾನ್ಯ ಷೇರುಗಳನ್ನು ಪರಿವರ್ತಿಸಲು ಆಯ್ಕೆ ನೀಡಲಾಗಿ ಇದರಲ್ಲಿ ರೂ. 2,00,000 ಸಾಲಿಗರು. ಅವರಿಗೆ ಬರುವ ಹಣಕ್ಕೆ ಬದಲಾಗಿ ಷೇರುಗಳನ್ನು ತೆಗೆದುಕೊಳ್ಳುವ ಆಯ್ಕೆಯಿಂದ ತೃಪ್ತರಾದರು.

(d) ಸಾಲಿಗರ ಆಯ್ಕೆಯಂತೆ ನಗದನ್ನು ಪಾವತಿಸಲು ಮತ್ತು ವರ್ಧಿಸುವ ಕಾರ್ಯ ಬಂಡವಾಳಕ್ಕಾಗಿ ರೂ. 10ರ ಮುಖ ಬೆಲೆಯ 50,000 ಸಾಮಾನ್ಯ ಷೇರುಗಳನ್ನು ನೀಡಿತು. ಎಲ್ಲಾ ಮೊತ್ತವನ್ನು ಅರ್ಜಿಯ ಜೊತೆಗೆ ಪಾವತಿಯಾಗಬೇಕಾದುದರಿಂದ ಪೂರ್ಣವಾಗಿ ವಂತಿಗೆಯಾಯಿತು.

(e) ಜಮೀನು ಮತ್ತು ಕಟ್ಟಡ ರೂ. 2,00,000 ಮರು ಮೌಲ್ಯಮಾಪನವಾಗಿದೆ ಆದರೆ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ರೂ. 2,10,000 ವಜಾಗೊಳಿಸುವುದು. ಅನುಮಾನ ಸಾಲಕ್ಕಾಗಿ ರೂ. 5,000ಗಳನ್ನು ಕಾಯ್ದಿರಿಸಲಾಯಿತು.

ರೋಜು ದಾಖಲಿಸಿ ಹಾಗೂ ಮರು ನಿರ್ಮಾಣವಾದ ಮೇಲೆ ಆಢಾವೆ ಪತ್ರವನ್ನು ತಯಾರಿಸಿ.

13. Rajesh Ltd was liquidated on 31-3-2018. On that date the Balance sheet was as follows :

| Particulars | Amount |
|---|---|
| Liabilities : | |
| Share capital | 1,00,000 |
| 8% Debentures | 1,00,000 |
| Mortgage Loan | |
| (On Land & building) | 50,000 |
| Sundry creditors | 80,000 |
| Total | 3,30,000 |
| Assets : | |
| Land & Building | 60,000 |
| Plant & Machinery | 60,000 |
| Stock | 60,000 |
| Debtors | 70,000 |
| Cash | 5,000 |
| Profit and Loss A/c | 75,000 |
| Total | 3,30,000 |

Assets realised as follows : Land & Building ₹ 55,000, Stock ₹ 20,000, Plant and Machinery ₹ 25,000 and half of the debtors are bad and balance realised 60% of book value.

Liquidator is entitled to a commission of 3% on amount realised other than cash and 2% on the amount paid to total unsecured creditors.

Preferential creditors amounted to ₹ 10,000 included in creditors.

Liquidation expenses amounted to ₹ 970

Prepare liquidators final statement of account.

ದಿನಾಂಕ 31-3-2018 ರಂದು ರಾಜೇಶ್ ಕಂಪನಿಯು ಸ್ವಯಂ ವಿಸರ್ಜನೆಗೊಂಡಿತು. ಅವರ ಆಢಾವೆ ಪಟ್ಟಿಯು ಈ ರೀತಿ ಇದೆ :

| ವಿವರಗಳು | ರೂ. |
|---|---|
| ಜವಾಬ್ದಾರಿಗಳು : | |
| ಶೇರು ಬಂಡವಾಳ | 1,00,000 |
| ಶೇ. 8ರ ಸಾಲಪತ್ರಗಳು | 1,00,000 |
| ಅಡಮಾನ ಸಾಲ | |
| (ಭೂಮಿ ಮತ್ತು ಕಟ್ಟಡ ಆಧಾರ) | 50,000 |
| ಇತರೆ ಸಾಲಿಗರು | 80,000 |
| ಒಟ್ಟು | 3,30,000 |

| ವಿವರಗಳು | ರೂ. |
|---|---|
| ಆಸ್ತಿಗಳು : | |
| ಭೂಮಿ ಮತ್ತು ಕಟ್ಟಡಗಳು | 60,000 |
| ಯಂತ್ರ ಮತ್ತು ಸ್ಥಾವರಗಳು | 60,000 |
| ದಾಸ್ತಾನು | 60,000 |
| ಋಣಿಗಳು | 70,000 |
| ನಗದು | 5,000 |
| ಲಾಭ ನಷ್ಟ ಖಾತೆ | 75,000 |
| ಒಟ್ಟು | 3,30,000 |

ಕಂಪನಿಯ ಆಸ್ತಿಗಳನ್ನು ಕೆಳಕಂಡಂತೆ ನಗದೀಕರಿಸಲಾಯಿತು. ಭೂಮಿ ಮತ್ತು ಕಟ್ಟಡಗಳು ರೂ. 55,000, ದಾಸ್ತಾನು ರೂ. 20,000, ಯಂತ್ರ ಮತ್ತು ಸ್ಥಾವರಗಳು ರೂ. 25,000 ಮತ್ತು ಋಣಿಗಳಲ್ಲಿ ಅರ್ಧದಷ್ಟು ಕರಡು ಸಾಲವಾಗಿದ್ದು ಉಳಿದ ಋಣಿಗಳಲ್ಲಿ ಶೇ. 60 ರಷ್ಟು ಮಾತ್ರ ವಸೂಲಾಯಿತು.

ಕೈಯಲ್ಲಿರುವ ನಗದು ಹಣವನ್ನು ಹೊರತುಪಡಿಸಿ ನಗದೀಕರಿಸಿದ ಆಸ್ತಿಯ ಮೇಲೆ ಶೇ. 3 ರಂತೆ ಮತ್ತು ಒಟ್ಟು ಅಭದ್ರ ಸಾಲಿಗರಿಗೆ ಪಾವತಿ ಮಾಡಿರುವ ಹಣದ ಮೇಲೆ ಶೇ. 2 ರಂತೆ ಕಮೀಷನ್ ಅನ್ನು ವಿಸರ್ಜನಾಧಿಕಾರಿಗೆ ನೀಡಬೇಕು.

ಸಾಲಿಗರ ಮೊತ್ತದಲ್ಲಿ ಪ್ರಥಮ ಹಕ್ಕಿನ ಸಾಲಿಗರಿಗೆ ಕೊಡಬೇಕಾದದ್ದು ರೂ. 10,000ಗಳು ಸೇರಿದೆ.

ವಿಸರ್ಜನಾ ವೆಚ್ಚ ರೂ. 970 ಆಗಿದೆ.

ವಿಸರ್ಜನಾಧಿಕಾರಿಯ ಅಂತಿಮ ಪಟ್ಟಿಯನ್ನು ತಯಾರಿಸಿ.